© 2021 IJNRD | Volume 6, Issue 9 September 2021 | ISSN: 2456-4184 | IJNRD.ORG

# ಹೊಸಗನ್ನಡ ಸಂಧಿಕಾಲದ ಅಪ್ರಕಟಿತ ಕವಿ ಐನೆಲೆಯ ಕರಿಬಸವಾರ್ಯ

**ಡಾ. ಮಹಾದೇವಿ ಆರ್. ಹಿರೇಮಠ**
ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.
Email: drmrhiremathh@gmail.com

ಮಾನವನ ಬದುಕು ನಿಂತ ನೀರಲ್ಲ, ಅದು ಸದಾ ವಿಕಾಸಶೀಲವಾದುದು. ಬದುಕು ಬೆಳೆದಂತೆ, ಬದಲಾದಂತೆ ಹೊಸತನವನ್ನು ಪಡೆಯುತ್ತದೆ. ಈ ಮಾತು ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಕಾಲದಿಂದ ಕಾಲಕ್ಕೆ ಹಳೆಯ ರೂಪಗಳನ್ನು ನಿಧಾನವಾಗಿ ಕಳಚುತ್ತಾ, ಹೊಸ ರೂಪಗಳನ್ನು ತೊಡುತ್ತಾ ಬೆರಳೆಣಿಕೆಗೆ ನಿಲುಕುವ ಕೆಲವೇ ತಿರುವುಗಳಲ್ಲಿ ಹಾಯ್ದು ಸಮೃದ್ಧವಾಗಿ ಬೆಳೆದಿರುವಂತಹ ಕನ್ನಡ ಸಾಹಿತ್ಯದ ಇತಿಹಾಸವನ್ನು ಅವಲೋಕಿಸಿದಾಗ, ಆ ತಿರುವುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಆ ತಿರುವುಗಳೇ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡಗಳೆಂದು ಕರೆಯಲ್ಪಡುವ ಕನ್ನಡ ಭಾಷಾ ಅವಸ್ಥೆಯ ಸ್ಪಷ್ಟ ಚಿತ್ರಣಗಳು. ಇವು ಕೇವಲ ಕಾಲ ಸೂಚಕವಾಗಿ ಬಳಸಿದವುಗಳಲ್ಲ. ಆಯಾ ಶತಮಾನದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಸ್ಥಿತಿಗಳನುಸಾರವಾಗಿ, ಸಾಹಿತ್ಯಕ ಪ್ರೇರಣೆ, ಧೋರಣೆ, ಮತ್ತು ಸಾಧನೆ ಸಿದ್ಧಿಗಳನ್ನು ಲಕ್ಷಿಸಿ ಸೂಚಿಸಿದವುಗಳಾಗಿವೆ.

ಕ್ರಿ.ಶ.೧೦ನೇ ಶತಮಾನದಲ್ಲಿ ಸೃಷ್ಟಿಯಾದ ಹಳಗನ್ನಡದ 'ಮಾರ್ಗಕಾವ್ಯ' ಪರಂಪರೆ ಏಕಕಾಲಕ್ಕೆ ಧರ್ಮ–ಕಾವ್ಯಧರ್ಮ ಎರಡರಲ್ಲೂ ಸುಳಿದು ಸ್ವರ್ಣಯುಗವನ್ನು ಕಂಡಿತು. ಮುಂದೆ ೧೨ನೇ ಶತಮಾನದಲ್ಲಿ ನಡುಗನ್ನಡದ ಮುಖ್ಯ ತೊರೆಯಾದ ವಚನ ಸಾಹಿತ್ಯದ ಆವಿರ್ಭಾವಕ್ಕೆ 'ಮತ–ತತ್ವ'ದ ವಿಚಾರಗಳನ್ನು ಸಾಮಾನ್ಯ ಜನತೆಯತ್ತ ಕೊಂಡೊಯ್ಯಬೇಕೆನ್ನುವ ತೀವ್ರ ಹಂಬಲವೇ ಕಾರಣವಾಗಿ, ಇದೇ ಹಂಬಲ ಮುಂದೆ ವೀರಶೈವ ಧರ್ಮದ ಉತ್ಕರ್ಷಕ್ಕೂ ಕಾರಣವಾಯಿತು. ಆತ್ಮೋದ್ಧಾರವೇ ಈ ಸಾಹಿತ್ಯದ ಪರಮಗುರಿಯಾಯಿತು. ಕನ್ನಡ ಭಾಷೆಯು ವಾಗಾಡಂಬರ, ಶಬ್ದಜಾಲ, ಪಾಂಡಿತ್ಯ ಪ್ರದರ್ಶನಕ್ಕಾಗಿ ಕಾರ್ಯಮಾಡದೆ ಭವನೀಗುವ ಮಹಾಸಿದ್ದಿಯಾಗಿ ಮಾಧ್ಯಮವಾಯಿತು. ವಚನಗಳು ಪರಮಾರ್ಥದ ಅನುಭವದ ನವನೀತಗಳಾದುವು. ಅನುಭಾವಿಗಳ ಅನುಭಾವ–ಮಥನದ ಪರಿಣಾಮವಾಗಿ ಜನಸಾಮಾನ್ಯರುಗಳ ದೈವೀ ಸಾಕ್ಷಾತ್ಕಾರಕ್ಕೆ ಈ ಸಾಹಿತ್ಯ ಅಣಿಗೊಳಿಸಿತು. ವಚನಕಾರರ ಉಜ್ವಲವಾದ ವಚನವಾಹಿನಿಯು 'ಸಿಡಿಲ ಮರಿ'ಯ ಗರ್ಜನೆಯಂತೆ ಎಲ್ಲೆಡೆ ತರಂಗಗೊಂಡು ಜನಾಂಗದ ಪ್ರಜ್ಞೆ ಜಾಗೃತವಾಗಲು ಕಾರಣವಾಯಿತು.

ವಚನಕಾರರ ಜೀವನ, ಮತ್ತು ಅವರ ಸಾಹಿತ್ಯದ ದಟ್ಟವಾದ ಪ್ರಭಾವ, ಮುಂಬರುವ ಎಂಟುನೂರು ವರ್ಷಗಳ ಸಾಹಿತ್ಯದ ಮೇಲೆ ಉಂಟಾಗಿರುವುದನ್ನು ಸ್ಪಷ್ಟವಾಗಿ ಕಾಣಬಹುದು. ಐತಿಹಾಸಿಕ ವ್ಯಕ್ತಿಗಳಾದ ಶಿವಶರಣರನ್ನು ದೈವೀಪುರುಷರೆಂದೂ, ಅಮರರೆಂದೂ, ಅವತಾರಿಗಳು, ಕಾರಣಿಕರು, ಅಸಮಾನ್ಯರೆಂದೂ, ಭಾವಿಸಿದ್ದಲ್ಲದೆ, ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಅವರ ತತ್ವಗಳ ಪ್ರಸಾರ ಅತ್ಯಂತ ರಭಸದಿಂದ ನಡೆಯಿತು. ಶಿವಶರಣರ ವಿಚಾರಧಾರೆ, ಅವರ ಕಲ್ಪನೆಯ ಸಮಾಜ, ಇವುಗಳ ಬಗ್ಗೆ ಉದ್ದೀಪನಗೊಂಡು, ಅವರ ತತ್ವಗಳ ಪ್ರಸಾರದ ಉದ್ದೇಶದಿಂದಲೇ ಶಿವಶರಣರನ್ನು, ಶಿವಭಕ್ತರನ್ನು, ತಮ್ಮ ಕಾವ್ಯಗಳ ನಾಯಕರನ್ನಾಗಿ ಮಾಡಿಕೊಂಡರು. ವೀರಶೈವ ಸಾಹಿತ್ಯವು ಒಂದು

ಘಟ್ಟದಲ್ಲಿ ಮಹಾಕವಿ ಹರಿಹರ, ರಾಘವಾಂಕರಿಂದ ಸಮೃದ್ಧಗೊಂಡರೆ, ಮತ್ತೊಂದು ಘಟ್ಟದಲ್ಲಿ ಚಾಮರಸ, ಭೀಮಕವಿ, ವಿರೂಪಾಕ್ಷ ಪಂಡಿತ, ಗುಬ್ಬಿಯ ಮಲ್ಲಣಾರ್ಯ, ಲಕ್ಕಣ್ಣದಂಡೇಶ, ನೂರೊಂದು ವಿರಕ್ತರು ಹಾಗೂ ಶೂನ್ಯಸಂಪಾದನಾಕಾರರಿಂದ ಸಮೃದ್ಧಗೊಂಡಿತು. ಯಾವ ರಾಜಾಶ್ರಯವನ್ನೂ ನೆಚ್ಚಿಕೊಳ್ಳದ ವೀರಶೈವ ಸಾಹಿತ್ಯ ಮಠಮಾನ್ಯಗಳಲ್ಲಿ ಸ್ವತಂತ್ರ ಕವಿಗಳ ಮನದಂಗಳದಲ್ಲಿ ಗಟ್ಟಿಯಾಗಿ ನೆಲೆಯೂರಿತು.

ಕ್ರಿ. ಶ. ೧೮ ನೇ ಶತಮಾನ ಕನ್ನಡ ನಾಡಿನಲ್ಲಿ ಸಾಮಾಜಿಕ ರಾಜಕೀಯ ದೃಷ್ಟಿಯಲ್ಲಿ ಪ್ರಕ್ಷುಬ್ಧ ಕಾಲ. ಆಗ ಕನ್ನಡ ನಾಡಿನಲ್ಲಿ ಹೇಳಿಕೊಳ್ಳುವಂತಹ ಯಾವುದೇ ಬಲಿಷ್ಠ ರಾಜಮನೆತನಗಳಿಲ್ಲದ ಕಾರಣ ಸಂಸ್ಕೃತಿ ಸಂವರ್ಧನೆಯೂ ಕ್ಷೀಣಿಸತೊಡಗಿತ್ತು. ಚಿಕ್ಕಪುಟ್ಟ ಅರಸರ ಮೇಲೆ ಮೇಲಿಂದ ಮೇಲೆ ನಡೆಯುವ ಘರ್ಷಣೆಗಳು, ಬ್ರಿಟಿಷರು ಕನ್ನಡನಾಡಿನಲ್ಲಿ ತಮ್ಮ ರಾಜಸತ್ತೆಯನ್ನು ಸ್ಥಾಪಿಸಲು ದಾರಿಮಾಡಿಕೊಟ್ಟವು. ನಾಡಿನ ಉತ್ತರದ ಭಾಗಗಳು ಪೇಳ್ವೆಗಳ ಹಾಗೂ ಹೈದರಾಬಾದ್ ನಿಜಾಮನ ರಾಜಸತ್ತೆಯಲ್ಲಿ ಸಿಕ್ಕಿಹಾಕಿಕೊಂಡಿದ್ದವು. ಒಂದೆಡೆ ಮರಾಠಿ, ಇನ್ನೊಂದೆಡೆ ಉರ್ದು, ಮತ್ತೊಂದೆಡೆ ಇಂಗ್ಲೀಷ್ ಭಾಷೆಗಳ ಒತ್ತಡದಿಂದಾಗಿ ಕನ್ನಡ ಭಾಷೆ ಉಸಿರುಗಟ್ಟತೊಡಗಿತ್ತು. ಇಂತಹ ಸಂದರ್ಭದಲ್ಲಿ ಯಾವುದೇ ರಾಜಾಶ್ರಯವೂ ಇಲ್ಲದೆ ಸ್ವತಂತ್ರ ನೆಲೆಯಲ್ಲಿ ನಿಂತು ಸಾಹಿತ್ಯ ಸೃಷ್ಟಿ ಮಾಡುವುದರ ಮೂಲಕ, ಕನ್ನಡ ಸಾಹಿತ್ಯಕ್ಕೆ ನವ ಚೇತನವನ್ನು ತುಂಬಿದವರು ವೀರಶೈವ ಮಠಾಧೀಶರು ಮತ್ತು ವೀರಶೈವ ಕವಿಗಳು. ಈ ಶತಮಾನದ ಪೂರ್ವಾರ್ಧದಲ್ಲಿ ವೀರಶೈವ ಕವಿಗಳ ಗಮನ ಯಕ್ಷಗಾನಗಳ ರಚನೆಯ ಕಡೆಗೆ ಹರಿದು ಅನೇಕ ಯಕ್ಷಗಾನಗಳ ರಚನೆಯಾದುವು. ಕ್ರಿ. ಶ. ೧೭೫೦ ರ ಸುಮಾರು ನಾಲ್ಕೈದು ದಶಕಗಳ ಕಾಲಾವಧಿಯಲ್ಲಿ ಯಕ್ಷಗಾನ ರಚನೆಯಲ್ಲೂ ನೀರಸತೆ ಉಂಟಾಗಿ ಕೇವಲ ಶತಕಗಳು, ಸ್ತೋತ್ರಗಳು, ಅಷ್ಟಕಗಳು, ತತ್ವಪದಗಳು ರಚನೆಯಾಗತೊಡಗಿದವು. ಗಮನಾರ್ಹವಾದ ಯಾವುದೇ ಕಾವ್ಯ ರಚನೆಯಾಗಲಿಲ್ಲ. ಇಂತಹ ಕ್ಷೀಣದೆಸೆಯಲ್ಲಿದ್ದ ಸಾಹಿತ್ಯವಾಹಿನಿಗೆ ಹೊಸ ನೆರೆಯೊಂದನ್ನು ಸೇರಿಸಿ ಬಲಗೊಳಿಸಿದ ಗಮನಾರ್ಹ ವೀರಶೈವ ಕವಿ, ಅನುಭಾವಿ, ಐನೂಲಿನ ಕರಿಬಸವಾರ್ಯ,

'ಸಾರಕವಿಜನ ಸುಧಾಂಬುಧಿ ಪೂರ್ಣಚಂದ್ರನೂ' ವೀರಶೈವಾಚಾರ ಮಾರ್ಗಪ್ರವರ್ತನೋದ್ಧಾರ ಸದ್ಗುಣಮಣಿಯೂ' ಎನಿಸಿ 'ಕವೀಂದ್ರ ಶಾಬಕ' ನೆಂಬ ಬಿರುದು ಪಡೆದ ಕವಿ ಕರಿಬಸವಾರ್ಯನ ಸಾಧನೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲೊಂದು ದಿಟ್ಟಹೆಜ್ಜೆ ಯಾವುದೇ ರಾಜಾಶ್ರಯವೂ ಇಲ್ಲದೆ ಮಠಮಾನ್ಯಗಳ ನೆರಳೂ ದೊರೆಯದೆ ಸ್ವತಂತ್ರವಾಗಿ ಸಾಹಿತ್ಯ ಕೃಷಿಗೈದ ವೀರಶೈವ ಕವಿಗಳಲ್ಲಿ ಕರಿಬಸವಾರ್ಯನ ಹೆಸರು ಗಮನಾರ್ಹವಾದದ್ದು.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಪ್ರಸಿದ್ಧರಾದ ಕವಿಗಳ ಬಗ್ಗೆ ನಮಗೆ ಸಾಕಷ್ಟು ಮಾಹಿತಿ ದೊರಕುತ್ತದೆಯಾದರೂ ಹಲವಾರು ಕವಿಗಳ ಕಾಲ ದೇಶಗಳ ಬಗೆಗಿರುವ ಸಂಗತಿಗಳು ಗಮನಾರ್ಹವಾದ ಸಾಹಿತ್ಯವನ್ನು ಸೃಷ್ಟಿಮಾಡಿ ಎಲೆಯ ಮರೆಯ ಕಾಯಿಯಂತೆ ಪೊದೆಯ ಮರೆಯ ಪುಷ್ಪದಂತೆ ಕಂಪು ಬೀರಿದ್ದರೂ, ಆಧಾರಗಳೆಂಬ ಕಂಪಿನ ಜಾಡನ್ನು ಹಿಡಿದು, ಮೂಲವನ್ನು ಶೋಧಿಸಿ ಸತ್ಯವನ್ನು ಹೊರಹಾಕಬಲ್ಲ ಸಂಶೋಧಕನೊಬ್ಬ ಬಾರದಿದ್ದರೆ ಆ ಸಾಹಿತ್ಯ ನೆಲದ ಮರೆಯ ನಿಧಾನವಾಗಿಯೇ ಉಳಿದುಬಿಡುತ್ತದೆ. ಅಂತಹ ಕವಿಗಳ ಚರಿತ್ರೆ ಮತ್ತು ಸಾಹಿತ್ಯ, ತಾಳೆಯೋಲೆ ಹಾಗೂ ಹಸ್ತಪ್ರತಿಗಳಲ್ಲೇ ಉಳಿದು, ಜನರ ಅಲಕ್ಷ್ಯ, ಅಜ್ಞಾನ, ಮೂಢನಂಬಿಕೆ, ಇವುಗಳಿಂದಾಗಿ ಬೆಳಕುಕಾಣದೆ ಹೇಳಹೆಸರಿಲ್ಲದಂತೆ ನಶಿಸಿ ಹೋಗುತ್ತವೆ. ಉಪಲಬ್ದವಾದ ಕೆಲವು ಕೃತಿಗಳೂ ಪ್ರಕಟವಾಗದೆ, ಹಸ್ತಪ್ರತಿಗಳ ರೂಪದಲ್ಲೇ ಉಳಿದು, ಮುಂದೊಂದು ದಿನ

ಹುಳುಗಳ ಬಾಯಿಗೋ ಬೆಂಕಿಗೋ, ಆಹಾರವಾಗುವದುಂಟು. ಇನ್ನು ಅಲ್ಲೊಂದು ಇಲ್ಲೊಂದು ಕೃತಿಗಳು ಬೆಳಕಿಗೆ ಬಂದರೂ, ಕವಿಚರಿತ್ರೆಯ ಬಗ್ಗೆ, ಹಾಗೂ ಕವಿ ರಚಿಸಿದ ಇತರ ಕೃತಿಗಳ ಬಗ್ಗೆ ಸಂಪೂರ್ಣ ಮಾಹಿತಿ ದೊರೆಯದೆ, ಕವಿಯ ಕುರಿತಾಗಿ ಜನಮನದಲ್ಲಿರುವ ಕೆಲವು ವದಂತಿಗಳೂ ಕೂಡ ಅಳಿಸಿಹೋಗುತ್ತವೆ. ಈ ರೀತಿ ಕವಿಚರಿತೆಕಾರರಿಂದ, ಸಾಹಿತ್ಯಚರಿತ್ರೆಕಾರರಿಂದ, ಹಾಗೂ ಸಂಶೋಧಕರಿಂದ ನಿರ್ಲಕ್ಷ್ಯಕ್ಕೀಡಾದ ಕವಿಯೇ ಐನೂಲಿ ಕರಿಬಸವಾರ್ಯ. ಕನ್ನಡ ಸಾಹಿತ್ಯಕ್ಕೆ ಅಮೂಲ್ಯವಾದ ಕಾಣಿಕೆಯನ್ನು ನೀಡಿದಾಗ್ಯೂ ಕವಿಯ ಬಗ್ಗೆ ಮತ್ತು ಆತನ ಕೃತಿಗಳ ಬಗ್ಗೆ, ಸಾಹಿತ್ಯ ಚರಿತ್ರೆಕಾರರ ಗಮನಹರಿಯದೆ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇನ್ನೂ ಅಜ್ಞಾತವಾಗಿಯೇ ಉಳಿದಿದ್ದಾನೆ.

**ಕಾಲ–ದೇಶಾದಿ ಜೀವನ ಚರಿತ್ರೆ**

ಕರಿಬಸವಾರ್ಯನ ಜೀವನ ಚರಿತ್ರೆ ಇಂದು ಕಾಲಗರ್ಭದಲ್ಲಿ ಅಡಗಿ ಹೋಗಿದೆ. ಅವನ ವೈಯಕ್ತಿಕ ಜೀವನದ ಬಗೆಗೆ ಸ್ಪಷ್ಟವಾದ ಮಾಹಿತಿಗಳು ದೊರೆಯುವುದಿಲ್ಲ. 'ಸುಕವೀಂದ್ರಶಾಬಕ' 'ಕವೀಂದ್ರಶಾಬಕ' 'ಶಾಬಕ ಕವಿ' ಎಂಬ ಬಿರುದನ್ನು ಹೊಂದಿದ್ದ ಕರಿಬಸವಾರ್ಯನನ್ನು, ಸಂಗಮೇಶ್ವರ ಪುರಾಣದ ಕರ್ತೃವಾದ ಬಸವರಾಜ (ಕ್ರಿ.ಶ. ೧೮೦೦) ಹಾಗೂ ಚತುರಾಚಾರ್ಯ ಪುರಾಣದ ಕರ್ತೃವಾದ ತಿಲಕಪುರದ ಸೋಮಕವಿ (ಕ್ರಿ.ಶ.೧೮೩೧) ಇವರುಗಳು ತಮ್ಮ ಕೃತಿಯ ಆದಿಯಲ್ಲಿ ಸ್ಮರಿಸಿದ್ದಾರೆ. ಇವರನ್ನು ಬಿಟ್ಟರೆ, ಇಡಿಯಾಗಿ ಇಲ್ಲವೆ ಬಿಡಿಯಾಗಿ ಎಲ್ಲಿಯೂ ಕರಿಬಸವಾರ್ಯನ ಬಗೆಗೆ ಮಾಹಿತಿ ಸಿಗುವುದಿಲ್ಲ, ಕವಿಯು ತನ್ನ ಕೃತಿಗಳಲ್ಲಿ ಪೂರ್ವದ ಸಂಸ್ಕೃತ ಕವಿಗಳಾದ ವ್ಯಾಸ, ಭವಭೂತಿ, ಕಾಳಿದಾಸ, ಮಯೂರ, ದಂಡಿ, ಭಾರವಿ, ಮಾಘ, ಬಾಣ, ಉದ್ಭಟ ಮೊದಲಾದವರನ್ನು ಕನ್ನಡ ಕವಿಗಳಾದ ಚಾಮರಸ, ಹರಿಹರ, ರಾಘವಾಂಕ, ಭೀಮಕವಿ, ಪಾಲ್ಕುರಿಕೆಯ ಸೋಮನಾಥ ಕೆರೆಯ ಪದ್ಮರಸ ಮೊದಲಾದವರನ್ನು ಸ್ಮರಿಸಿದ್ದಾನೆ. ಹಿರಿಯ ಸಮಕಾಲೀನರೂ ಅನುಭಾವಿಗಳೂ ಆದ ಬಕ್ಕಪ್ಪಯ್ಯ ಹಾಗೂ ಅಂಬಲಿಗೆ ಚನ್ನಮಲ್ಲ ಕವಿ ಮತ್ತು ಪವಾಡ ಪುರುಷ ಕಲಬುರ್ಗಿ ಶರಣಬಸವ ಇವರನ್ನು ಸ್ಮರಿಸಿದ್ದಾನೆ. ಆದರೆ ತನ್ನ ವೈಯಕ್ತಿಕ ಜೀವನದ ಬಗ್ಗೆ ಯಾವ ಕೃತಿಗಳಲ್ಲಿಯೂ ಹೇಳಿಕೊಂಡಿಲ್ಲ. ಅವನು ರಚಿಸಿದ 'ಶ್ರೀ ಕುಮಾರ ವಿಜಯ ವಿಳಾಸ' ವೆಂಬ ಕೃತಿಯಲ್ಲಿ ಅವನ ಗುರುಪರಂಪರೆಯನ್ನು ಹೊರತುಪಡಿಸಿ, ವೈಯಕ್ತಿಕ ಜೀವನದ ಬಗ್ಗೆ ಇತರೆ ಯಾವುದೇ ಹೆಚ್ಚಿನ ಅಂಶಗಳು ತಿಳಿದುಬರುವುದಿಲ್ಲ. ಆದರೆ ಕರಿಬಸಾವಾರ್ಯನ ಬಾಲ್ಯಜೀವನ, ವಿದ್ಯಾಭ್ಯಾಸ, ಗೃಹಸ್ಥಜೀವನಗಳ ಕುರಿತಾಗಿ ಹಾಗೂ ಸಾಹಿತ್ಯಕ ಪ್ರೇರಣೆ ಆಧ್ಯಾತ್ಮಿಕ ಒಲವು ಇತ್ಯಾದಿಗಳ ಪರಿಚಯ ಇಂದಿಗೂ ಆ ಭಾಗದ ವಯೋವೃದ್ಧರ, ಹಿರಿಯ ಸಂಗೀತ ಹಾಗೂ ಸಾಹಿತ್ಯ ಪ್ರೇಮಿಗಳ ನೆನಪಿನಲ್ಲಿ ಮಸಕು ಮಸಕಾಗಿ ಉಳಿದುಕೊಂಡಿದೆ. ಅವರ ಮುಖಾಂತರ ಹಾಗೂ ಕವಿಯ ದೂರಸಂಬಂಧಿ ವಂಶಜರು ನೀಡುವ ಮಾಹಿತಿಗಳ ಆಧಾರದ ಮೇಲೆ, ಮತ್ತು ಕವಿಯ ಕೃತಿಗಳ ಆಧಾರದಿಂದ ಕವಿಯ ಜೀವನ ಚರಿತ್ರೆಯನ್ನು ಪುನರ್ರಚಿಸಲು ಸಾಧ್ಯವಾಗಿದೆ.

ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿಗೆ ಸೇರಿದ ಇಂದಿನ 'ಐನೂಲಿ' ಗ್ರಾಮವೇ ಕವಿ ಕರಿಬಸವಾರ್ಯನ ಹುಟ್ಟೂರು. ಕವಿಯೇ ತನ್ನ ಕೃತಿಗಳಲ್ಲಿ ಹೇಳಿಕೊಂಡಿರುವ ಹಾಗೆ, ಹಿಂದೆ ಇದನ್ನು 'ಐನೆಲೆ' 'ಐನಿಲಯ' 'ಐನಿಲಯಪುರ' ಎಂಬುದಾಗಿ ಕರೆಯುತ್ತಿದ್ದರು. ಪಶ್ಚಿಮಕ್ಕೆ ಊರಿಗೆ ಆತುಕೊಂಡಂತೆ ಉಮಾಚಲ ಬೆಟ್ಟವಿದೆ. ಸದಾ ಹಸಿರಿನಿಂದ ನಳನಳಿಸುತ್ತಿರುವ ಈ ಭೂಮಿ ಕವಿಗೆ ಜನ್ಮ ನೀಡಿದ ಪುಣ್ಯಭೂಮಿ. ಈ ಪಾವನ ಧರೆಯಲ್ಲಿ

ಶತಾನಂದಮೂರ್ತಿ(ನೂರಂದಯ್ಯ) ಗಿರಿಜಾದೇವಿ ಎಂಬ ಪುಣ್ಯದಂಪತಿಗಳ ಗರ್ಭದಲ್ಲಿ ಕ್ರಿ.ಶ. ೧೭೪೫ರಲ್ಲಿ ಕವಿ ಕರಿಬಸವಾರ್ಯ ಜನಿಸಿದರು. ಬೆಳೆವ ಸಿರಿ ಮೊಳಕೆಯಲ್ಲಿ, ಎಂಬಂತೆ ಬಾಲ್ಯದಲ್ಲಿ ಇತರರಿಗಿಂತ ಭಿನ್ನನಾಗಿಯೇ ಇದ್ದನು. ಊರ ಪಕ್ಕಕ್ಕಿರುವ ಪ್ರಾಚೀನ ಯಮಿಜನ ತಪಸ್ಥಾನವಾದ ಉಮಾಚಲ ಬೆಟ್ಟಕ್ಕೆ ಭೋಗಲಿಂಗ ಬೆಟ್ಟವೆಂತಲೂ ಕರೆಯುತ್ತಾರೆ. ಈ ಬೆಟ್ಟದ ಮೇಲಿರುವ ಭೋಗಲಿಂಗ ದೇವಾಲಯದೆದುರು ದನಕರುಗಳನ್ನು ಮೇಯಲು ಬಿಟ್ಟು, ದೇವಾಲಯದಲ್ಲಿ ಧ್ಯಾನಾಸಕ್ತನಾಗಿ ಕುಳಿತುಕೊಳ್ಳುವುದಲ್ಲದೆ ಕಲ್ಲುಗಳ ಮೇಲೆ ಏನೇನೋ ಬರೆಯುತ್ತಿದ್ದನು. ಕೆಲವು ಸಲ 'ಓಂ' ಕಾರ ಪ್ರಣಮಾಕ್ಷರವೇ ಅದಾಗಿರುತ್ತಿತ್ತು. ಇವರ ಮನೆತನದ ಮುಖ್ಯ ಉದ್ಯೋಗ ಒಕ್ಕಲಿಗತನವಾಗಿದ್ದು, ಬಡತನದಿಂದಾಗಿ ಕರಿಬಸವಾರ್ಯನಿಗೆ ಶಿಕ್ಷಣವನ್ನು ಕೊಡಿಸುವುದು ಅವನ ತಂದೆ – ತಾಯಿಗಳಿಗೆ ಸಾಧ್ಯವಾಗಲಿಲ್ಲ. ಇದೇ ರೀತಿ ೨೫ ವರ್ಷಗಳು ಗತಿಸಿದವು. ಒಂದು ದಿನ ಇದನ್ನು ಗಮನಿಸಿದ ಶಿಷ್ಯನೊಬ್ಬ ಅವನನ್ನು ಓದಿಸುವ ಮಠಕ್ಕೆ ಸೇರಿಸಿದ. ಹಗಲು ದನ ಕಾಯುವುದು ರಾತ್ರಿ ಅಕ್ಷರಾಭ್ಯಾಸ ಮಾಡುವುದು ಹಾಗೂ ಭೂಪಾಳಿಸ ವನ ನೀತಿಶ್ಲೋಕಗಳನ್ನು ಕಂಠಪಾಠ ಮಾಡುವುದು. ಹೀಗೆಯೇ ಒಂದೆರಡು ವರ್ಷಗಳು ಕಳೆದ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ, ಈಗಿನ ಬೀದರ್ ಜಿಲ್ಲೆಯ ಹುಮನಾಬಾದ ತಾಲೂಕಿಗೆ ಸೇರಿದ ಚಿಟಗುಪ್ಪೆಗೆ ಹೋದನು. ಅಲ್ಲಿ ಓದಿಸುವ ಮಠದ ಬಸವರಾಜ ಗುರುಗಳ ಹತ್ತಿರ ಅಧ್ಯಯನ ಮುಂದುವರಿಯುತ್ತಿರುವಂತೆಯೇ ಹುಟ್ಟು ಕವಿಯಾದ ಕರಿಬಸವಾರ್ಯನ ವ್ಯಕ್ತಿತ್ವದ ಆಳದಲ್ಲಡಗಿದ ಕವಿಪ್ರತಿಭೆಯು ಗರಿಗೆದರಿತು. ಅನುಭವ ಪದಗಳನ್ನು ರಚಿಸಿ ಹಾಡಲಾರಂಭಿಸಿದ. ಕುಲಗುರುಗಳಾದ ಚಿಟಗುಪ್ಪೆಯ ಚನ್ನವೀರೇಶ್ವರರು ಆಶೀರ್ವದಿಸಿ ಪ್ರೋತ್ಸಾಹಿಸಿದರು. ಜೊತೆಗೆ ಹಿರಿಯ ಸಮಕಾಲೀನೂ, ಕಕ್ಕನ ಮಗನೂ ಆದ ಪವಾಡ ಪುರುಷ ಅನುಭಾವಿ ಕವಿ ಬಕ್ಕಪ್ರಭುಗಳ ಪ್ರಭಾವ ಬೇರೆ. ಗುರು ಚನ್ನವೀರೇಶ್ವರನ ಅಂಕಿತವನ್ನಿಟ್ಟುಕೊಂಡು ಅನೇಕ ತತ್ವಪದಗಳನ್ನು ಬರೆದನು.

**ವಿವಾಹ–ವೈರಾಗ್ಯ**

ಗುರು ಸಾನಿಧ್ಯದಿಂದ ಮರಳಿ ಐನೂಲಿಗೆ ಬಂದ ಕರಿಬಸವಾರ್ಯನಿಗೆ ರಾಚಮ್ಮನೊಂದಿಗೆ ವೈವಾಹಿಕ ಬಂಧನ, ಸಂಸಾರಕ್ಕಿಂತಲೂ ಸಾಹಿತ್ಯ ಹಾಗೂ ಆಧ್ಯಾತ್ಮಗಳೆಡೆಗೆ ವಿಶೇಷ ಒಲವನ್ನಿರಿಸಿಕೊಂಡಿದ್ದ ಕರಿಬಸವಾರ್ಯನಿಗೆ ಸಂಸಾರವೊಂದು ಬಂಧನವೇ ಆಯಿತು. ಸಂಸಾರದ ಸುಖಭೋಗಗಲಿಗೆ ಒಗ್ಗದ ಆತನ ಮನಸ್ಸು, ಭಗವಂತನ ಪ್ರೇಮಕ್ಕಾಗಿ ಕಾತರಿಸುತ್ತಿತ್ತು. ತತ್ಫಲವಾಗಿ ಪರಮಾತ್ಮನ ಅಗಲಿಕೆಯ ವಿರಹದಿಂದ ಬಳಲಿದ ಭಕ್ತನೊಬ್ಬನ ಅಂತರಂಗದ ಕೂಗು ಅವನ ಸ್ತೋತ್ರಗಳಲ್ಲಿ ಕೇಳಿಬಂದರೆ, ಗುರುವಿನ ಸನಿಹದಿಂದಗಲಿನ ಶಿಷ್ಯನೊಬ್ಬನ ಅಂತರಂಗದ ತಳಮಳ ಅವನ ಸ್ವರವಚನಗಳಲ್ಲಿ ಮಾರ್ದನಿ ಪಡೆಯಿತು. ಅವನ ಒಲವು ಸಂಸಾರದಲ್ಲಿ ಸಮರಸವನ್ನು ತರದೆ, ಭಕ್ತಿ ಮತ್ತು ಜ್ಞಾನಗಳಲ್ಲಿ ಸಾಹಿತ್ಯ ಮತ್ತು ಆಧ್ಯಾತ್ಮಗಳಲ್ಲಿ ಸಮರಸವನ್ನು ತರಲು ಪ್ರಯತ್ನಿಸಿತು. ಭಕ್ತಿಯಿಂದ ಸ್ತುತಿಸಿದ್ದು ಸ್ತೋತ್ರವಾದರೆ, ಅನುಭವದಿಂದ ಭಾವುಕನಾಗಿ ನುಡಿದದ್ದು ಹಾಡಾಯಿತು. ಜನರ ಸುಖದುಃಖಗಳಿಗೆ ಸ್ಪಂದಿಸಿ, ಭಕ್ತಿಭರಿತ ಸುವ್ವಾಲೆ, ಶೋಭನ ಪದಗಳು, ಜೋಗುಳ ಪದಗಳು, ಮಂಗಳಾರತಿಗಳು ಕಾಮನ ಹೋಳಿ ಹಾಡುಗಳಂತಹ ಹಾಡುಗಳನ್ನೂ ಬರೆದನು.

ಕವಿಗೆ ವಯಸ್ಸಾಗುತ್ತ ಬಂದಂತೆ ಅನುಭವ ಪರಿಪಕ್ವಗೊಂಡು ಮುಂದೆ ಮಠಮಾನ್ಯಗಳಲ್ಲಿ ಪುರಾಣ ಹೇಳಲು ಪ್ರಾರಂಭಿಸಿದನು. ಸಾಮಾಜಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಜನಹಿತ ಬಯಸಿ ಸೇವೆಗೆ ತೊಡಗಿದನು. ಇದೇ ಸಂದರ್ಭದಲ್ಲಿ ಸಂಸ್ಕೃತದ ಅಧ್ಯಯನದೊಂದಿಗೆ ಸಂಗೀತದ ಜ್ಞಾನಾರ್ಜನೆಯೂ ಸಾಗಿತು. ತತ್ಪರಿಣಾಮವಾಗಿಯೋ ಏನೋ ತಾನು ಬರೆದ ದ್ವಿಪದಿ, ಚೌಪದಿ, ಸ್ತೋತ್ರ, ಅಷ್ಟಕ, ಮಂಗಳಾರತಿ ಮೊದಲಾದವುಗಳಿಗೆ ರಾಗಗಳನ್ನು ಹೆಸರಿಸಿದ್ದಾನೆ.

"ಸಂಸಾರದ ನೀರಸತೆಯೇ ಕರಿಬಸವಾರ್ಯನನ್ನು ಪತ್ನಿಯಿಂದ ದೂರ ಮಾಡಿದಂತೆ ತೋರುತ್ತದೆ. ತನ್ನ ೫೦ನೇ ವಯಸ್ಸಿನಲ್ಲಿ ಚಿಂಚೋಳಿಗೆ ಬಂದು ನೆಲೆಸಿದ. ಅದುವರೆಗೆ ಸಂಸ್ಕೃತವನ್ನು ತಕ್ಕಮಟ್ಟಿಗೆ ಬಲ್ಲವನಾಗಿದ್ದ ಕವಿ, ಈ ಸಂದರ್ಭದಲ್ಲಿ ಸಂಸ್ಕೃತದ ಅಷ್ಟಾದಶ ಪುರಾಣಗಳು, ಹಾಗೂ ಕಾಳಿದಾಸ ಮೊದಲಾದವರ ಕೃತಿಗಳ ಮೂಲಕ ಸಂಸ್ಕೃತದ ಆಳವಾದ ಅಧ್ಯಯನವನ್ನು ಕೈಕೊಂಡ ಕನ್ನಡದ ವೀರಶೈವ ಕವಿಗಳಾದ ಹರಿಹರ, ರಾಘವಾಂಕ, ಭೀಮಕವಿ, ಚಾಮರಸ, ದಾರ್ಶನಿಕ ಕವಿ ನಿಜಗುಣ ಶಿವಯೋಗಿ, ಷಡಕ್ಷರ ಕವಿ ಮೊದಲಾದವರ ಕೃತಿಗಳ ಅಧ್ಯಯನ ಮಾಡಿದ."[೧] ಜೊತೆಗೆ ಛಂದಸ್ಸು, ವ್ಯಾಕರಣ ಗ್ರಂಥಗಳ ಹಾಗೂ ಜ್ಯೋತಿಶಾಸ್ತ್ರ, ವೈದ್ಯಶಾಸ್ತ್ರ, ಗಣಿತಶಾಸ್ತ್ರಗಳ ಅಧ್ಯಯನವನ್ನೂ ಕೈಕೊಂಡ. ಜ್ಞಾನದಾಹಿಯಾದ ಕರಿಬಸವಾರ್ಯ ಸತತಾಭ್ಯಾಸ, ಸತ್ಕಾರ್ಯ ಸತ್ಸಂಗಗಳಲ್ಲಿ ಸದಾಕಾಲವೂ ನಿರತನಾಗಿ ವೈಚಾರಿಕವಾಗಿ ಬೆಳೆದ. ಹಲವಾರು ಧಾಟಿಗಳಲ್ಲಿ ಹಲವಾರು ಛಂದಸ್ಸಿನಲ್ಲಿ ಕಾವ್ಯ ಕೃತಿಗಳನ್ನು ಹೆಣೆದ. ಅಂದಿನ ಪರಿಸರದಲ್ಲಿ ಪ್ರಚಲಿತವಾಗಿದ್ದ ಸ್ವರವಚನಗಳನ್ನಷ್ಟೇ ಅಲ್ಲದೆ, ವೃತ್ತ, ಶತಕ, ಅಷ್ಟಕ, ಸ್ತೋತ್ರ, ರಗಳೆ ಮೊದಲಾದ ಛಂದೋಬಂಧಗಳಲ್ಲಿ ಸಾಹಿತ್ಯ ಸೃಷ್ಟಿಸಿದ. ಇದರಂತೆ ವೈವಿಧ್ಯಮಯವಾದ ಸಾಹಿತ್ಯ ಸೃಷ್ಟಿಸಿದ ಕವಿ ತನ್ನ ೭೭ನೇ ವಯಸ್ಸಿನಲ್ಲಿ 'ಶ್ರೀ ಕುಮಾರ ವಿಜಯ ವಿಳಾಸಂ' ಎಂಬ ಉತ್ಕೃಷ್ಟ ಶೈಲಿಯ ಬೃಹತ್ಕಾವ್ಯವೊಂದನ್ನು ರಚಿಸಿದ. ಚಿಂಚೋಳಿಯಲ್ಲಿ ಬಂದು ನೆಲೆಸಿದ ನಂತರ ಸುಮಾರು ४೫ ವರ್ಷಗಳವರೆಗೂ ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿದ್ದ ಕವಿ ಹೃದಯ, ೯೫ ವರ್ಷಗಳ ತುಂಬು ಜೀವನ ನಡೆಸಿ ಕ್ರಿ.ಶ. ೧೮೪೦ರಲ್ಲಿ ತನ್ನ ಅಂತ್ಯವನ್ನು ಕಂಡುಕೊಂಡಿತು.

ಕರಿಬಸವಾರ್ಯನದು ತ್ರಿಮುಖವಾದ ಕವಿ ಪ್ರತಿಭೆ. ಈತ ಅನುಭಾವಿ ಕವಿ ಅಷ್ಟೇ ಅಲ್ಲ, ಜನಪದ ಕವಿಯೂ ಹೌದು, ಪಂಡಿತ ಕವಿಯೂ ಹೌದು. ಚಂದನಕ್ಕೆ ಕುಂದಣವಿಟ್ಟ ಹಾಗೆ ಪ್ರತಿಭೆಯ ಜೊತೆ ಪಾಂಡಿತ್ಯವೂ ಬೆರೆಯುತ್ತ ಹೋದಂತೆ ತನ್ನ ಕಾಲದಲ್ಲಿ ಹಾಗೂ ತನಗಿಂತ ಪೂರ್ವದ ಕವಿಗಳೆಲ್ಲ ಪ್ರಚಲಿತಗೊಳಿಸಿದ ಎಲ್ಲ ಛಂದೋರೂಪಗಳನ್ನು ತನ್ನ ಕೃತಿಗಳಲ್ಲಿ ಬಳಸಿಕೊಂಡು ಪ್ರಯೋಗಶೀಲತೆಯನ್ನು ಮೆರೆದಿದ್ದಾನೆ. ಚತುರ್ಭಾಷಾ (ಕನ್ನಡ, ಸಂಸ್ಕೃತ, ತೆಲಗು, ಮರಾಠಿ) ಬಲ್ಲವನಾಗಿದ್ದ ಕರಿಬಸವಾರ್ಯ ಒಟ್ಟು ೩೭ ಕೃತಿಗಳನ್ನು ರಚಿಸಿದ್ದು ಅವುಗಳಲ್ಲಿ ೨೧ ಕೃತಿಗಳು ಮಾತ್ರ ಲಭ್ಯವಾಗಿವೆ. ಕನ್ನಡ, ಸಂಸ್ಕೃತಗಳೆರಡರಲ್ಲಿಯೂ ಸಾಹಿತ್ಯ ಸೃಷ್ಟಿ ಮಾಡಿದ್ದು, ಸ್ತೋತ್ರ, ಶತಕ, ಅಷ್ಟಕಗಳು, ವೃತ್ತಗಳು ಸಂಸ್ಕೃತದಲ್ಲಿಯೇ ಇವೆ. ಕನ್ನಡದಲ್ಲಿ ಮರಾಠಿ ಮಾದರಿಯ ಅಭಂಗಗಳನ್ನು ಬರೆದಿದ್ದಾನೆ. ಕವಿಯ ಮನೆಯಲ್ಲಿ 'ಬಲ್ಲಾಳ ಚಾರಿತ್ರಮು' ಎಂಬ ಹೆಸರಿನ ತೆಲುಗು ಕೃತಿಯೊಂದು ಹಾಗೂ ಇನ್ನೆರಡು ತೆಲುಗು ಹಸ್ತಪ್ರತಿಗಳು ದೊರೆತಿವೆ. ಇದರಿಂದ ಕವಿ ತೆಲುಗು ಮರಾಠಿಗಳನ್ನು ಬಲ್ಲವನಾಗಿದ್ದನೆಂದು ತಿಳಿದುಬರುತ್ತದೆ. ಅಲ್ಲದೆ ಕವಿಯ ಮನೆಯಿಂದ

'ನೃಪತುಂಗಾಭ್ಯುದಯಂ' ಎಂದು ಬೇರೆ ಹೆಸರಿನಿಂದ ಕರೆಯಲ್ಪಟ್ಟ ಶ್ರೀವಿಜಯನ ಕವಿರಾಜಮಾರ್ಗದ ಹಸ್ತಪ್ರತಿಯೊಂದು ಡಾ॥ ಎಂ.ಎಂ. ಕಲಬುರ್ಗಿಯವರಿಗೆ ದೊರಕಿದೆ.

ಕರಿಬಸವಾರ್ಯ ವಿರಚಿತ ಕೃತಿಗಳಲ್ಲೆಲ್ಲ ಅತ್ಯಂತ ಶ್ರೇಷ್ಠವಾದ ಬೃಹತ್ಕಾವ್ಯವೆಂದರೆ 'ಶ್ರೀ ಕುಮಾರ ವಿಜಯ ವಿಳಾಸಂ' ಈ ಕೃತಿಯನ್ನು ಕ್ರಿ.ಶ. ೧೮೨೨ರಲ್ಲಿ ರಚನೆ ಮಾಡಿದ್ದಾನೆ. ಕವಿಭಾವ ಪರಿಪಕ್ವಗೊಂಡ ಹಂತದಲ್ಲಿ ರಚಿತವಾದ ಕೃತಿ ಇದಾಗಿದೆ. ಈ ಕಾವ್ಯಕ್ಕೆ ಮೂಲ ಆಕರವನ್ನು ಸಂಸ್ಕೃತ ಅಷ್ಟಾದಶ ಮಹಾಪುರಾಣಗಳಿಂದ ಪಡೆದುಕೊಂಡಿದ್ದಾನೆ. ಪ್ರಸ್ತುತ ಕಥಾವಸ್ತುವು ಸಂಸ್ಕೃತ ಸ್ಕಂದಪುರಾಣದ ಶಂಕರ ಸಂಹಿತೆಯ ಶಿವರಹಸ್ಯ ಖಾಂಡವನ್ನಾಧರಿಸಿದ್ದಾಗಿದೆ. ಸಂಭವಕಾಂಡ, ಬಾಲಕಾಂಡ, ಅಸುರಕಾಂಡ, ವೀರಮಹೇಂದ್ರಕಾಂಡ, ಯುದ್ಧಕಾಂಡ ಮತ್ತು ದೇವಕಾಂಡ ಎಂಬ ಆರು ಕಾಂಡಗಳ ಹದಿನಾಲ್ಕು ಆಶ್ವಾಸಗಳಿಂದ ಕೂಡಿದ 'ಕುಮಾರ ವಿಜಯ'ದ ಕಥಾವಸ್ತುವನ್ನು ಕನ್ನಡಕ್ಕೆ ತರುವಾಗ ೭೫ ಪ್ರಕರಣಗಳ, ೩೫೮೩ ವಾರ್ಧಕ ಷಟ್ಪದಿಗಳಲ್ಲಿ ಸಂಗ್ರಹಾತ್ಮಕವಾಗಿ ಹಿಡಿದಿಟ್ಟಿದ್ದಾನೆ. ಇದನ್ನು ಮೂಲದಲ್ಲಿರುವಂತೆ ಯಥಾವತ್ತಾಗಿ ಅನುಸರಿಸದೆ, ಸಂಗ್ರಹಾತ್ಮಕವಾಗಿ ಔಚಿತ್ಯಪೂರ್ಣವಾಗಿ ತನ್ನ ಸ್ವಂತಿಕೆಯೊಂದಿಗೆ ಕನ್ನಡಕ್ಕೆ ತಂದಿದ್ದಾನೆ. ವಸ್ತುವಿನ ನಿರ್ಮಾಣದಲ್ಲಿ ಸ್ವಂತಿಕೆ ಇರದಿದ್ದರೂ, ವಸ್ತುವಿನ ನಿರೂಪಣೆಯಲ್ಲಿ, ಭಾವಾಭಿವ್ಯಕ್ತಿ ಹಾಗೂ ರಸಪ್ರಾಚುಯವನ್ನುಂಟುಮಾಡುವಲ್ಲಿ ಕವಿಯ ಸ್ವಂತಿಕೆ ಇದೆ. ವೀರರಸ ಕಾವ್ಯವೊಂದರ ವಿಶಾಲಹರವನ್ನು ವಾರ್ಧಕದ ಲಯದಲ್ಲಿ ಮೇಳವಿಸಿ, ಭಾವ ಮತ್ತು ನಾದವನ್ನು ತುಂಬಿ ಕಾವ್ಯಕ್ಕೆ ಗಾಂಭೀರ್ಯವನ್ನು ತಂದಿದ್ದಾನೆ.

ಕರಿಬಸವಾರ್ಯನ ಕುಮಾರ ವಿಜಯದ ರಚನೆಗೆ ತೆಲುಗಿನಲ್ಲಿ ಕೊಡೂರು ನಗರದ ಬಾಲಸರಸ್ವತಿ ಬರೆದಿರುವ ಶಿವರಹಸ್ಯ (ಷಣ್ಮುಖ ವಿಜಯ) ಕೃತಿಯೇ ಮುಖ್ಯವಾಗಿ ಪ್ರೇರಣೆಯನ್ನು ನೀಡಿದೆ. ಅದನ್ನು ಕವಿ ತನ್ನ ಕಾವ್ಯದ ಪ್ರಾರಂಭದ ಎಂಟು (ಪ್ರಕರಣ ೧.೪೧ರಿಂದ ೪೮) ಪದ್ಯಗಳಲ್ಲಿ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ. ತನ್ನ ಕೃತಿ ರಚನೆಗೆ ಪ್ರೇರಣೆಯೊದಗಿ ಬಂದ ಸಂದರ್ಭವನ್ನೂ ಸಹ ತಿಳಿಸಿದ್ದಾನೆ. ಒಮ್ಮೆ ಕವಿಯು ಗುರುಗಳಾದ ಚನ್ನವೀರೇಂದ್ರರು ಹಾಗೂ ಸ್ನೇಹಿತರು ಮತ್ತು ಭಕ್ತಾದಿಗಳೊಂದಿಗೆ ಯಾತ್ರಾರ್ಥಿಯಾಗಿ ಶ್ರೀಶೈಲಕ್ಕೆ ಹೋಗಿದ್ದನು. ಮಲ್ಲಿಕಾರ್ಜುನ ಭ್ರಮರಾಂಬಿಕೆಯರ ದರ್ಶನವನ್ನು ಪಡೆದು, ನಂತರ ಪಾತಾಳಗಂಗೆ, ಬಿಲ್ವವನ, ಕದಳೀವನ ಮುಂತಾದ ಪುಣ್ಯಸ್ಥಳಗಳನ್ನು ವೀಕ್ಷಿಸಿ ಬಳಿಕ ಆ ರಮ್ಯಗಿರಿಯ ಏಳುನೂರು ಮಠಗಳಲ್ಲಿ ಪ್ರಸಿದ್ಧವಾದ ಸಾರಂಗಮಠಕ್ಕೆ ಬರಲು, ಸಾರಂಗಮಠದ ಅಧಿಪತಿ ಸಿದ್ದೇಶ್ವರನ ಸಭೆಯಲ್ಲಿ ವೀರಮಾಹೇಶ್ವರರು, ಭಕ್ತರು, ಕವೀಶ್ವರರು, ಧೀರದ್ವಿಜರು ಮುಂತಾದವರು ರಾರಾಜಿಸಿದ್ದರು. ಎಲ್ಲರೂ ಕವಿಯನ್ನು ಸ್ವಾಗತಿಸಿ ಆದರ ಸತ್ಕಾರಗಳಿಂದ ಸದ್ವಿನಯಪೂರ್ವಕವಾಗಿ ಆಗಮನ ವೃತ್ತಾಂತ ಸುಕ್ಷೇಮಗಳನ್ನು ಆಲಿಸಿದರು. ಬಳಿಕ ವೀರಮಾಹೇಶ್ವರರು ಕೊಡೂರು ನಗರದ ಬಾಲಸರಸ್ವತಿಯ ಸ್ಕಂದಪುರಾಣದ ಶಂಕರ ಸಂಹಿತೆಯ ಶಿವರಹಸ್ಯ ಖಾಂಡವನ್ನಾಧರಿಸಿ ಆಂಧ್ರ ಭಾಷೆಯಲ್ಲಿ 'ಶಿವರಹಸ್ಯ' (ಷಣ್ಮುಖ ವಿಜಯ) ಎಂಬ ಕೃತಿಯನ್ನು ರಚಿಸಿರುವನು.

"ಆತನಂತೆ ಮಹಾಸ್ಕಾಂದದ ರಹಸ್ಯಮತಿ

ನೂತನಾಲಂಕಾರ ನವರಸಗಳಿಂದ ವಿ

ಖ್ಯಾತಮಾಗೆಸೆವ ಕರ್ಣಾಟ ಭಾಷೆಗಳಿಟ್ಟು ಕಾವ್ಯಮಂ ವಿರಚಿಸಿದಡೆ

ಭೂತಳದೊಳ್ ಅಖಿಳ ವಿದ್ವಜ್ಜನರು

ಪ್ರೀತಿಯಿಂ ಪಠಿಸಿಯಾಲಿಸಿ ಮುಕ್ತರಹರು”[೨]

“.. ಮಂಜುಳ ಮಹಾಸೇನನ ಕಥಾಕೌತುಕದ ಕೃತಿಯ

’ಪಳಗನ್ನಡದೊಳು ತಿಳಿಗನ್ನಡದೊಳೆಸೆವ ಕವಿಜನರೊಳಾರುಸಿರಲಿಲ್ಲ

ಇಳೆಯೊಳಿದು ಪೊಸತೆನಿಕುಮಖಿಳ ಕೋವಿದರ ಸಂ.

ಕುಳಕೆ ಸಕ್ಕದ ನುಡಿಗಳಂ ಬಿರ್ಚಿಸು ಕವಿಕುಲ

ತಿಲಕ ನೀಂ......”[೩]

ಎಂದು ನುಡಿಯಲು ತಾನು ಈ ಕಾವ್ಯವನ್ನು ರಚಿಸಿದ್ದಾಗಿ ಹೇಳಿಕೊಂಡಿರುವನು. ಇಲ್ಲಿ ಕವಿಯು ಕವಿಕುಲತಿಲಕನಾಗಿದ್ದು ’ಕಾವ್ಯ ಪೊಸತು ಎನ್ನುವಂತೆ ಆಗುತ್ತದೆಂದೂ, ಇಂತಹ ಕೃತಿಯನ್ನು ಹಳಗನ್ನಡ ಇಲ್ಲವೆ ತಿಳಿಗನ್ನಡದಲ್ಲಿ ಈವರೆಗೆ ಯಾರೂ ಬರೆದಿಲ್ಲವೆಂದೂ ನೀನೂ ಬರೆದರೆ ನಿನ್ನ ಪುಣ್ಯಕ್ಕೆ ಎಣೆಯೇ ಇಲ್ಲ. ಅಕಳಂಕ ಮಲ್ಲಿಕಾರ್ಜುನನ ಅಂಕಿತವನ್ನಿಟ್ಟು ಪಾರ್ವತೀನಂದನನ ಕೃತಿ ವಿರಚಿಸು’ ಎಂದು ಪ್ರೇರೇಪಿಸಿದ್ದನ್ನು ಸ್ಮರಿಸಿಕೊಂಡಿರುವನು. ಅಂತೆಯೇ ಮಲ್ಲಿಕಾರ್ಜುನನ ಅಂಕಿತವನ್ನಿಟ್ಟು,

“ಪ್ರವಿಮಳ ಸ್ಕಾಂದಮಂ ಗೀರ್ವಾಣ ಭಾಷೆಯಿಂ

ಕವಿವರ ವ್ಯಾಸನುಸುದರ್ಂತೆ ಸೂತನು ಪೇಳ

ಲವನಿಯೊಳು ಶಂಕರಾಮಾತ್ಯ ಸುತನಾಂಧ್ರದಿಂ ರಚಿಸಿದಂ ಶಿವರಹಸ್ಯಂ

ಭವನಾತ್ಮಭವ ಗುಹನ ಮೃದುಪದಾಬ್ಜಂಗಳ

ಸ್ತವನ ಸಂವ್ಯಾಜದಿ ’ಕವೀಂದ್ರ ಶಾಬಕ’ನು ತಾಂ

ಸುವಿಲಾಸ ಕರ್ಣಾಟ ಭಾಷೆಯಿಂ ನಿರ್ಮಿಸಿ....”[೪]

ಕೃತಾರ್ಥನಾಗಿದ್ದಾನೆ. ಕನ್ನಡ ಸಾಹಿತ್ಯದಲ್ಲಿರುವ ಕೊರತೆಯೊಂದನ್ನು ಮನಗಂಡು, ಕೃತಿರಚನೆ ಮಾಡುವುದರ ಮೂಲಕ ಆ ಕೊರತೆಯನ್ನು ನೀಗಿಸಿದ್ದಾನೆ. ಹಾಗೆ ನೋಡಿದರೆ ಕನ್ನಡ ಸಾಹಿತ್ಯದಲ್ಲಿ ಕುಮಾರ ವಿಜಯ (ಷಣ್ಮುಖ ವಿಜಯ) ದ ಕಥಾವಸ್ತುವುಳ್ಳ ಕೃತಿಗಳು ರಚನೆಯಾಗಿರುವುದು ಕೇವಲ ಮೂರು ಕೃತಿಗಳು ಮಾತ್ರ. ಕಾಲದ ದೃಷ್ಟಿಯಿಂದ (ಕ್ರಿ.ಶ. ೧೮೨೨) ಕರಿಬಸವಾರ್ಯನ ಕೃತಿಯೇ ಮೊದಲಿನದು. ಸಂಗವಿಭು (ಗಣೇಕಲ್ಲ ಸಂಗಪ್ಪ) ವಿರಚಿತ ‘ಕುಮಾರ ವಿಜಯ’ವೆಂಬ ಚಂಪೂಕೃತಿ ಅಪೂರ್ಣವಾಗಿದೆ. ಸಂಗವಿಭುವಿನ ’ಕುಮಾರ ವಿಜಯ’ದ ರಚನೆಯ ಕಾಲವನ್ನು ಶಾಂತರಸರು ಕ್ರಿ.ಶ. ೧೮೩೨ರಿಂದ ೧೮೫೭ರ ನಡುವಿನ ಅವಧಿ ಎಂದು ನಿರ್ಧರಿಸಿದ್ದರಿಂದ ಕಾಲದ ದೃಷ್ಟಿಯಿಂದ ಈ ಕೃತಿಯು ಎರಡನೆಯ ಸ್ಥಾನದಲ್ಲಿ ನಿಲ್ಲುತ್ತದೆ.

ಮೂರನೆಯ ಕೃತಿ ಮುದ್ದಣ (ಕಾಲ ಕ್ರಿ.ಶ. ೧೮೭೦–೧೯೦೧) ಬರೆದ 'ಕುಮಾರ ವಿಜಯ' ವೆಂಬ ಯಕ್ಷಗಾನ. ತೀರಾ ಇತ್ತೀಚಿನದು. ಈ ಮೂರು ಕೃತಿಗಳನ್ನು ಅವಲೋಕಿಸಿದಾಗ ಕಾಲ, ಉದ್ದೇಶ, ವಸ್ತು, ಮತ್ತು ಶೈಲಿಗಳಿಂದ ಕರಿಬಸವಾರ್ಯನ 'ಶ್ರೀ ಕುಮಾರ ವಿಜಯ ವಿಳಾಸಂ' ಕೃತಿಯೇ ಮೊದಲಿನದಾಗಿ ನಿಲ್ಲುತ್ತದೆ. ಯಾವುದೇ ಒಬ್ಬ ಕವಿ ತನ್ನ ಮೆದುಳಿಗೆ ಹೊಳೆದ ವಿಷಯವನ್ನು ಪ್ರತಿಭೆಯ ಹೊಳಹಿನಿಂದ ಭಾಷಾ ಮಾಧ್ಯಮದಲ್ಲಿ ಸೆರೆಹಿಡಿಯಬಲ್ಲ, ಉತ್ತಮ ಕೃತಿಯಾಗಿಸಬಲ್ಲ. ಆದರೆ ಕವಿ ಕರಿಬಸವಾರ್ಯನ ಕುಮಾರ ವಿಜಯದ ರಚನೆಯ ಉದ್ದೇಶ ವಿಶಿಷ್ಟವಾಗಿದೆ. ತಾನು ಹುಟ್ಟಿ ಬೆಳೆದ ಪರಿಸರದಲ್ಲಿಯ ಹಾಗೂ ತನ್ನ ಸಾಹಿತ್ಯಕ ಪರಿಸರದಲ್ಲಿಯ ಕೊರತೆಯನ್ನು ಕಂಡುಕೊಂಡು, ಅದನ್ನು ನೀಗಿಸುವಲ್ಲಿ ಶ್ರಮಿಸಿದ ಕವಿಯ ಉದ್ದೇಶ ಅನುಪಮವಾದದ್ದು. ಈ ದೃಷ್ಟಿಯಿಂದ ಕರಿಬಸವಾರ್ಯನ ಸಾಧನೆ ಸಾರ್ವಕಾಲಿಕ ಮನ್ನಣೆಯನ್ನು ಪಡೆಯುವಂತಹುದಾಗಿದೆ. ತನ್ನ ಸಮಕಾಲೀನ ಓದುಗರ, ಸಾಹಿತ್ಯಾಭಿಮಾನಿಗಳ ಅಭಿರುಚಿ ಅವಶ್ಯಕತೆಗಳನ್ನು ಗಮನಿಸಿ, ಪುರಾಣೋಕ್ತ ವಸ್ತುವೊಂದನ್ನು ಜನಪ್ರಿಯ ಪುರಾಣ ಮಾದರಿಯಲ್ಲಿಯೇ ಹೇಳಹೊರಟಿದ್ದು, ಕವಿಗೆ ಸಹೃದಯರ ಬಗೆಗಿರುವ ಕಾಳಜಿ ವ್ಯಕ್ತವಾಗುತ್ತದೆ. ಆದರೆ ಸಂಸ್ಕೃತ ಭೂಯಿಷ್ಟವಾದ ಪ್ರೌಢ ರಚನೆಯಿಂದಾಗಿ 'ಕುಮಾರ ವಿಜಯ' ಕಾವ್ಯವು ಕೇವಲ ಪಂಡಿತವರ್ಗದವರ ಕೃತಿಯಾಗಿ ನಿಲ್ಲುತ್ತದೆ. ತನ್ನದು ಬುದ್ಧಿಜೀವಿಗಳಿಗಾಗಿಯೇ ರಚಿಸಿದ ಕೃತಿಯೆಂದು ಕಾವ್ಯದಲ್ಲಿ ಒಂದೆಡೆ ಸ್ಪಷ್ಟವಾಗಿ ಹೇಳಿಕೊಂಡಿದ್ದಾನೆ.

"ಪ್ರಥಿತ ಮನುಗಳ ಚಕ್ರವರ್ತಿಗಳ ಷೋಡಶ
ಪೃಥುವೀಶ್ವರರ ಪೌರುಷಂಗಳಭಿವರ್ಣಿಸಿದ
ಕೃತಿಗಳಂತಲ್ಲ ಗೌರೀಸರ್ವಮಂಗಳಾಪತಿ ಮಹಾದೇವ ಮೃಡನ
ಸುತ ಷಡಾಸ್ಕನ ಸುಮಹಿಮಾಚಾರಿತ್ರಂ ಮಹಾ
ದ್ಭುತಮನೆ ರಚಿಸಿದೆನೀ ಕಾವ್ಯಮತಿ ಭವ್ಯ ಪಂ
ಡಿತ ಚತುರ ಸುಜನರಾಲಿಸಿ ಪಾಲಿಸುವದೆಮ್ಮ ಬಾಲಕನು ಪೇಳ್ವನೆಂದು"೫

ಎಂಬುದಾಗಿ ತನ್ನ ಕೃತಿಯ ಔನ್ನತ್ಯವನ್ನು ಎತ್ತಿ ಹಿಡಿಯುತ್ತಾ ಸದ್ವಿನಯವನ್ನು ಮೆರೆಯುವುದರೊಂದಿಗೆ ತನ್ನದು ಪಂಡಿತ ಮಂಡಳಿಗಾಗಿ, ಚತುರರಿಗಾಗಿ ರಚಿಸಿದ ಕಾವ್ಯವೆಂದು ಹೇಳುತ್ತಾನೆ. ಕವಿಯ ಶೈಲಿ ಕೂಡ ಪಂಡಿತವರ್ಗಕ್ಕೆ ಮೀಸಲಾದ ಶೈಲಿಯಾಗಿದೆ. ನೂತನಾಲಂಕಾರ ನವರಸಗಳಿಂದ ಇಳೆಯೊಳಿದು ಪೊಸತೆನಿಸುವಂತೆ ಅಖಿಳ ಕೋವಿದರ ಸಂಕುಳಕ್ಕಾಗಿ ಕೃತಿ ರಚಿಸಿದೆನೆಂದು ಹೇಳುವುದರೊಂದಿಗೆ, 'ಭೂತಳದೊಳಖಿಳ ವಿದ್ವಜ್ಜನರು ಪ್ರೀತಿಯಿಂ ಪಠಿಸಿಯಾಲಿಸಿ ಮುಕ್ತರಹರು' ಎಂಬ ಲೋಕೋಪಕಾರದ ಮಹತ್ವಾಕಾಂಕ್ಷೆಯನ್ನು ಪೂರೈಸಿಕೊಂಡಿದ್ದಾನೆ.

ಕರಿಬಸವಾರ್ಯನ ದೃಷ್ಟಿಯಲ್ಲಿ ತನ್ನ ಕೃತಿ ಸಾಮಾನ್ಯವಾದುದಲ್ಲ ಚಕ್ರವರ್ತಿಗಳ ಪೃಥುವೀಶ್ವರರ ಪೌರುಷಂಗಳಭಿವರ್ಣಿಸಿದ ಕೃತಿಯಲ್ಲಿ ಸರ್ವಮಂಗಳಾಪತಿ ಮಹಾದೇವ ಮೃಡನಸುತ ಷಡಾಸ್ಯ (ಷಣ್ಮುಖ)ನ ಚಾರಿತ್ರವಿದು. 'ಕುಮಾರ ವಿಜಯ' ಕೃತಿಯ ಸಾರವನ್ನಿಲ್ಲಿ ಸಂಕ್ಷೇಪವಾಗಿ ಅವಲೋಕಿಸಬಹುದು.

ಪುರಾಣ ಪ್ರಸಿದ್ಧವಾದ ದಕ್ಷಯಾಗದಲ್ಲಿ ಪತಿಗೆ ಉಂಟಾದ ಅವಮಾನವನ್ನು ಸಹಿಸಲಾಗದ ದಾಕ್ಷಾಯಣಿಯು ಯಜ್ಞಕುಂಡದಲ್ಲಿ ಹಾರಿ ದೇಹತ್ಯಾಗಮಾಡುತ್ತಾಳೆ. ಪೂರ್ವಸಂಕಲ್ಪದಂತೆ ಮರುಜನ್ಮದಲ್ಲಿ ಹಿಮವಂತ ಮೇನೆಯರ ಮಗಳು ಗಿರಿಜೆಯಾಗಿ ಜನಿಸುತ್ತಾಳೆ. ಇತ್ತ ಸತಿಯಿಂದ ಅಗಲಿದ ಶಿವನು ದಕ್ಷಿಣಾಮೂರ್ತಿಯಾಗಿ ಚಿನ್ಮುದ್ರೆಯನ್ನು ಧರಿಸಿ

ಯೋಗನಿರತನಾಗುತ್ತಾನೆ. ಅತ್ತ ಕಶ್ಯಪನೆಂಬ ಮಹರ್ಷಿಯು ಮಾಯಾದೇವಿಯೆಂಬ ರಕ್ಕಸ ಕನ್ಯೆಯನ್ನು ಮೋಹಿಸಿ ಕೂಡಿದ್ದರಿಂದ ಶೂರ ಪದ್ಮಾಸುರ ಹಾಗೂ ತಾರಕನೆಂಬ ಭಯಂಕರ ರಕ್ಕಸರ ಜನನವಾಗುತ್ತದೆ. ಅವರ ಹಿಂದೆ ಅಸುರರ ಸಮೂಹವೇ ಉದ್ಭವಿಸುತ್ತದೆ. ಅವರು ಸಿಂಹರೂಪವನ್ನು ತಾಳಿ ಕ್ರೀಡಿಸಲು ಸಾವಿರ ಮುಖಗಳುಳ್ಳ ಸಾವಿರ ತೋಳುಗಳುಳ್ಳ ಸಿಂಹವಕ್ತ್ರಾಸುರನು ಜನಿಸುತ್ತಾನೆ. ಹೀಗೆಯೇ ಗಜ, ಬಕ, ಶಾರ್ದೂಲ, ಗೋಮೃಗ ಮೊದಲಾದ ರೂಪಗಳನ್ನು ಧರಿಸಿ ಕ್ರೀಡಿಸಿದ್ದರಿಂದ ಆಯಾ ಜಾತಿಯ ರಕ್ಕಸರು ಲೆಕ್ಕವಿಲ್ಲದಷ್ಟು ಸಂಖ್ಯೆಯಲ್ಲಿ ಜನಿಸುತ್ತಾರೆ. ಕಸ್ಯಪನು ತನ್ನ ಮಕ್ಕಳನ್ನು ಕರೆದು ಸದುಪದೇಶವನ್ನು ಗೈದು ತಪಸ್ಸಿಗೆ ಹೋಗುತ್ತಾನೆ. ತಾರಕ ಶೂರ ಪದ್ಮಾದಿ ರಕ್ಕಸರು ತಮ್ಮ ಕಠೋರವಾದ ತಪಸ್ಸಿನಿಂದ ಪರಮೇಶ್ವರನನ್ನು ಒಲಿಸಿಕೊಂಡು ಸಕಲ ಲೋಕಗಳ ಒಡೆತನವನ್ನು ಹಾಗೂ ಶಿವಶಕ್ತಿಯಿಂದ ಜನಿಸಿದವನಿಂದಲ್ಲದೆ ಬೇರಾರಿಂದಲೂ ತಮಗೆ ಮರಣ ಬಾರದಂತೆ ವರವನ್ನು ಪಡೆದು ದೇವತೆಗಳನ್ನು ಹಿಂಸಿಸತೊಡಗುತ್ತಾರೆ. ದೇವತೆಗಳು, ಮುನಿಗಳು ಎಲ್ಲರೂ ಶಿವನ ಮೊರೆಹೋಗುತ್ತಾರೆ. ಶಿವನು ಎಲ್ಲರಿಗೂ ಅಭಯಹಸ್ತವನ್ನೀಯುತ್ತಾನೆ. ಇದಕ್ಕೆ ಪರಿಹಾರವನ್ನರಿತ ದೇವತೆಗಳು ಗಿರಿಜೆಯು ಶಿವನನ್ನು ಸೇರಲು ಉಪಾಯ ಹೂಡುತ್ತಾರೆ. ಮನ್ಮಥನು ಯೋಗನಿದ್ರೆಯಲ್ಲಿದ್ದ ಶಿವನನ್ನು ಎಚ್ಚರಿಸಲು ಹೋಗಿ ಪ್ರಾಣವನ್ನೇ ಕಳೆದುಕೊಳ್ಳುತ್ತಾನೆ. ತನ್ನ ಸೌಂದರ್ಯದಿಂದ ಶಿವನನ್ನು ಒಲಿಸಿಕೊಳ್ಳಲಾಗದ ಗಿರಿಜೆಯು ಮುಂದೆ ಕಠೋರ ತಪಸ್ಸನ್ನಾಚರಿಸಿ ಶಿವನನ್ನು ಒಲಿಸಿಕೊಳ್ಳುತ್ತಾಳೆ. ದೇವತೆಗಳೆಲ್ಲರೂ ನಿಂತು ಶಿವ–ಪಾರ್ವತಿಯರ ವಿವಾಹವನ್ನು ನೆರವೇರಿಸುತ್ತಾರೆ. ಮುಂದೆ ಇವರೀರ್ವರ ಚಿತ್ಶಕ್ತಿಯಿಂದ ಕುಮಾರ (ಷಣ್ಮುಖ)ನು ಜನಿಸುತ್ತಾನೆ. ಕುಮಾರನು ಬೆಳೆಯುತ್ತಿದ್ದಂತೆಯೇ ಮುನಿಪುಂಗವರು ಎಲ್ಲ ಬಗೆಯ ವಿದ್ಯೆಗಳನ್ನು ಕಲಿಸುತ್ತಾರೆ.

ಬೆಳೆದು ದೊಡ್ಡವನಾದ ಕಾರ್ತಿಕೇಯನು ತನ್ನ ವಿಶ್ವರೂಪವನ್ನು ತೋರುತ್ತಾನೆ. ಸ್ಕಂದಗಿರಿಯಲ್ಲಿ ವಿಶ್ವಕರ್ಮನು ನಿರ್ಮಿಸಿದ ನಗರದಲ್ಲಿ ಪಟ್ಟಾಭಿಷಿಕ್ತನಾಗುತ್ತಾನೆ. ಭೂಸುರ ನಾರದನೋರ್ವ ಯಜ್ಞಕ್ರಿಯೆಯನ್ನು ಕೈಕೊಳ್ಳಲು, ರಕ್ಕಸರು ಬಂದು ನಾಶಗೊಳಿಸಲು ಪ್ರಯತ್ನಿಸುತ್ತಾರೆ. ಭೂಸುರ ನಾರದನು ಕುಮಾರನನ್ನು ಪ್ರಾರ್ಥಿಸಲು, ಕುಮಾರನು ರಾಕ್ಷಸರನ್ನು ಸಂಹರಿಸುತ್ತಾನೆ. ತಾರಕನು ಮೂಷಕನಾಗಿ ಕ್ರೌಂಚ ಪರ್ವತದಲ್ಲಿ ಅಡಗುತ್ತಾನೆ. ಕ್ರೌಂಚ ಸಮೇತವಾಗಿ ತಾರಕನನ್ನು ಕುಮಾರನು ಸಂಹರಿಸುತ್ತಾನೆ. ಇದರಿಂದ ಶೂರಪದ್ಮನು ದುಃಖಿತನಾಗುತ್ತಾನೆ.

ಶುಕ್ರಾಚಾರ್ಯರ ಸಲಹೆಯಂತೆ ಅನೇಕ ವೀರಯಜ್ಞಗಳನ್ನು ಆಚರಿಸಿ ಶಿವನನ್ನು ಒಲಿಸಿಕೊಂಡು ದೀರ್ಘಾಯುಷ್ಯ ವಿಪುಲ ಸಾಮ್ರಾಜ್ಯಗಳನ್ನು ಪಡೆದುಕೊಂಡ ಶೂರಪದ್ಮನು ಪುತ್ರನಾದ ವಜ್ರಬಾಹುವಿನೊಂದಿಗೆ ಜಗದಲ್ಲಿ ಅಲೆಯುತ್ತ ಎಲ್ಲ ಮಹಾ ಮಹಿಮರನ್ನು ಸೋಲಿಸುತ್ತಾನೆ. ಇಂದ್ರ ಮತ್ತು ಹರಿ ತಲೆಮರೆಸಿಕೊಳ್ಳುತ್ತಾರೆ. ಶೂರಪದ್ಮನ ತಂಗಿಯಾದ ಅಜಾಸ್ಯೆ, ಇಂದ್ರನ ಹೆಂಡತಿಯಾದ ಶಚೀದೇವಿ ಇವರನ್ನು ತನ್ನ ಅಣ್ಣ ಶೂರಪದ್ಮನಿಗೆ ಕಾಣಿಕೆಯಾಗಿ ಕೊಡಬೇಕೆಂದು ಅವರನ್ನು ಎಳೆದೊಯ್ಯುತ್ತಿರಲು ಶಾಸ್ತಮುನಿಯ ಸೇವಕನಾದ ಮಹಾಕಾಳಾಖ್ಯ ಎಂಬುವನು, ಅಜಾಸ್ಯೆ ಕರಗಳನ್ನು ಕತ್ತರಿಸಿಬಿಟ್ಟನು. ಇತ್ತ ಶೂರಪದ್ಮ ತನ್ನ ಸಹೋದರಿ ಅಜಮುಖಿಯಾದ ಅವಮಾನದಿಂದ ಮತ್ತಷ್ಟು ಕುದಿದು, ಸೂರ್ಯಚಂದ್ರ ಮೊದಲಾದ ಗ್ರಹಗಳನ್ನು ಬಂಧನದಲ್ಲಿರಿಸಿ ದೇವತೆಗಳನ್ನು ಅತಿಯಾಗಿ ಪೀಡಿಸತೊಡಗಿದನು.

ವಿಷ್ಣುವಿನ ಆತ್ಮಚಕ್ಷುವಿನಿಂದ ಜನಿಸಿದ ಅಮೃತವಲ್ಲಿ ಸೌಂದರ್ಯವಲ್ಲಿ ಎಂಬ ಕನ್ಯೆಯರೀರ್ವರು ಷಣ್ಮುಖನ ಶೌರ್ಯಪ್ರತಾಪಗಳನ್ನು ಕೇಳಿ ಅವನನ್ನೇ ವರಿಸುವೆವು ಎಂದು ಅವನನ್ನು ಕುರಿತು ತಪಸ್ಸನ್ನಾಚರಿಸುತ್ತಾರೆ. ಅವರ ತಪಸ್ಸಿಗೆ ಒಲಿದ ಷಣ್ಮುಖನು ರಕ್ಕಸರನ್ನು ಸಂಹರಿಸಿದ ನಂತರ ನಿಮ್ಮನ್ನು ವರಿಸುವೆನೆಂದು ಭಾಷೆ ಕೊಡುವನು.

ದೇವತೆಗಳ ಮೇಲಿನ ಸೇಡನ್ನು ತೀರಿಸಿಕೊಳ್ಳವದಕ್ಕೋಸ್ಕರ ಶೂರಪದ್ಮ ತನ್ನ ಮಗನಾದ ವಜ್ರಬಾಹುವನ್ನು ಕಳಿಸುವನು. ಕುಮಾರನ ಸೇನಾಪತಿ ವೀರಬಾಹು ವಜ್ರಬಾಹುವನ್ನು ಕೊಂದು ಸಿಂಹವಕ್ತನನ್ನು ಬಂಧಿಸುತ್ತಾನೆ. ದೇವ ದಾನವರೊಡನೆ ಘನಘೋರ ಕಾಳಗ ಮೊದಲಾಗುತ್ತದೆ. ಅನೇಕ ರಕ್ಕಸರು ಅಸು ನೀಗುತ್ತಾರೆ. ಶೂರಪದ್ಮ ತನ್ನ ಮಾಯಾಯುದ್ಧ ವಿದ್ಯೆಯಿಂದ ಸತ್ತವರನ್ನು ಬದುಕಿಸುತ್ತ ಅನೇಕ ಬಗೆಯಾಗಿ ಯುದ್ಧ ಮಾಡುತ್ತಾನೆ. ಷಣ್ಮುಖನು ಕೊನೆಯಲ್ಲಿ ತನ್ನ ವಿಶ್ವರೂಪವನ್ನು ತೋರಿ ನಂತರ ಶೂರಪದ್ಮನನ್ನು ಸಂಹರಿಸುತ್ತಾನೆ. ಅಮಾರಾವತಿಯಲ್ಲಿ ಇಂದ್ರನಿಗೆ ಪಟ್ಟಕಟ್ಟಿಸುತ್ತಾನೆ. ಹಿಂದೆ ಅಮೃತವಲ್ಲಿಯಾಗಿ ಸೌಂದರ್ಯವಲ್ಲಿಯಾಗಿ ವಿಷ್ಣುವಿನ ಆತ್ಮಚಕ್ಷುವಿನಿಂದ ಜನಿಸಿದ ಕನ್ಯೆಯರೀರ್ವರೂ ಮುಂದೆ ದೇವೇಂದ್ರನ ಮಗಳು ದೇವಸೇನೆಯಾಗಿಯೂ ಶಬರನ ಮಗಳು 'ಲವಲೀ'ಯಾಗಿಯೂ ಜನಿಸುತ್ತಾರೆ. ಕುಮಾರನು ಅವರಿಗಿತ್ತ ಭಾಷೆಯಂತೆ ಅವರೀರ್ವರನ್ನೂ ವಿವಾಹವಾಗಿ ಸ್ಕಂದಗಿರಿಯ ಆರಮನೆಯಲ್ಲಿ ನೆಲೆಸುತ್ತಾನೆ. ಸಕಲ ಲೋಕಗಳಿಗೂ ಕಲ್ಯಾಣವನ್ನುಂಟುಮಾಡುತ್ತಾನೆ.

ಈ ಮೇಲಿನ ಕಥಾವಸ್ತುವನ್ನು ಪಡೆದುಕೊಳ್ಳುವಲ್ಲಿ ಕರಿಬಸವಾರ್ಯ ತೆಲಗಿನ 'ಶಿವರಹಸ್ಯ' ಕೃತಿಗಿಂತಲೂ ಮೂಲ ಸಂಸ್ಕೃತ ಸ್ಕಂದಪುರಾಣಕ್ಕೆ ಹೆಚ್ಚು ಋಣಿಯಾಗಿದ್ದಾನೆ. ಕವಿಯ ಕುಮಾರ ವಿಜಯದ ಶೈಲಿಯ ಮುಖ್ಯ ಆಕರ್ಷಣೆ ಎಂದರೆ ಸಂಸ್ಕೃತ ಭೂಯಿಷ್ಠವಾದ ಪ್ರೌಢಭಾಷೆಯ ಬಳಕೆ. ಬಲುಮಟ್ಟಿಗೆ ಕವಿಯ ಭಾಷಾಪ್ರಯೋಗ ಸಿದ್ಧಶೈಲಿಯನ್ನನುಸರಿಸಿ ಸಾಗುತ್ತದೆಯಾದ್ದರಿಂದ ಜನಬಳಕೆಯಲ್ಲಿರುವ ವ್ಯಾವಹಾರಿಕ ಶಬ್ದಗಳ ಕಡೆಗೆ ಆತನ ಗಮನ ಅಷ್ಟಾಗಿ ಹರಿದಿಲ್ಲ. ಕವಿಯು ಕನ್ನಡ ಸಂಸ್ಕೃತಗಳೆರಡರ ಮೇಲೆಯೂ ಪ್ರಭುತ್ವವನ್ನು ಸಾಧಿಸಿದವನಾಗಿದ್ದಾನೆ. ಸಂಸ್ಕೃತ ಸಾಹಿತ್ಯದ ಪರಿಸರದ ಬೆಳಕಿನಲ್ಲಿಯೇ ತನ್ನ ಪ್ರತಿಭೆಗೆ ಸಾಣೆ ಹಿಡಿದಿದ್ದಾನೆ.

ಒಟ್ಟಿನಲ್ಲಿ ಅಲ್ಲಲ್ಲಿ ಬರುವ ಹೇರಳವಾದ ವರ್ಣನೆಗಳು ಹಾಗೂ ಸಂಸ್ಕೃತ ಭೂಯಿಷ್ಠವಾದ ಭಾಷೆಯೊಂದನ್ನು ಬಿಟ್ಟರೆ, ಕಥಾಸಂವಿಧಾನ ಕೌಶಲ್ಯ, ವಸ್ತುವಿನ ನಿರೂಪಣೆಯಲ್ಲಿಯ ನಾವಿನ್ಯತೆ, ಅಪಾರವಾದ ನೂತನ ಶಬ್ದಸೃಷ್ಟಿ, ಸಂಭಾಷಣೆಗೆ ಚಟುಲತೆ, ಆಯಾ ಮಾತಿಗೆ ತಕ್ಕ ಹಾವಭಾವ ಮತ್ತು ಆ ದೃಶ್ಯದ ಹಿನ್ನೆಲೆಯ ಚಿತ್ರಣಗಳಿಂದ ದೃಶ್ಯರೂಪಕವಾಗಿಸಬಲ್ಲ ಜಾಣ್ಮೆಯ ನಾಟಕೀಯತೆ ಈ ಎಲ್ಲ ಮುಖಗಳಿಂದ ಕವಿಯ ಶೈಲಿ ಯಶಸ್ಸನ್ನು ಪಡೆಯುತ್ತದೆ.

ಕರಿಬಸವಾರ್ಯ ವಿರಚಿತ ಸಾಹಿತ್ಯದಲ್ಲಿ ನಂತರದ ಸ್ಥಾನವನ್ನು ಪಡೆದುಕೊಳ್ಳುವುದು ಆತನ ಸ್ವರವಚನಗಳು. ಆತನ ಅನೇಕ ಸ್ವರವಚನಗಳು ಅವನ ಆಳವಾದ ಆಧ್ಯಾತ್ಮಿಕ ಅನುಭವದ ಪ್ರತೀಕಗಳಾಗಿವೆ. ಭಕ್ತಿ, ನೀತಿ, ಸಾಮಾಜಿಕ ವಿಡಂಬನೆ, ಸತಿಪತಿಭಾವದ ಶೃಂಗಾರಭಾವನೆಗಳು ಈ ತತ್ವಪದಗಳ ಮುಖ್ಯ ವಸ್ತುವಾಗಿದ್ದು ಅವು ದ್ವಿಪದಿ; ಚೌಪದಿ ಹಾಗೂ ಷಟ್ಪದಿಗಳಲ್ಲಿವೆ. ಶರೀರ ಪಾಪದ ಗೂಡು. ಇದನ್ನು ನಂಬದೆ ನೆಚ್ಚದೆ ಅರಿಷಡ್ವರ್ಗಗಳನ್ನು ಗೆದ್ದು ಸತ್ಸಂಗ ಬಯಸಿ ಶಿವಮಂತ್ರ ಜಪಿಸಲು ಮಾನವನಿಗೆ ಕರೆಕೊಟ್ಟ ವಿಷಯ ಅವನ ನೂರಾರು ತತ್ವಪದಗಳಲ್ಲಿ ಸೂರೆಗೊಂಡಿರುತ್ತದೆ. ಈ

ತತ್ವಪದಗಳು ತುಂಬ ಜನಪ್ರಿಯವಾಗಿದ್ದು ಬೀದರ್, ಗುಲಬರ್ಗಾ, ಬಿಜಾಪುರ ಜಿಲ್ಲೆಗಳಲ್ಲೆಲ್ಲ ಹರಿದು ಹಂಚಿ ಹೋಗಿವೆ. ಕೆಲವು ವೈಯಕ್ತಿಕ ಸಂಗ್ರಹಗಳಲ್ಲಿವೆ.

ಕರಿಬಸವಾರ್ಯನ ಸಾಹಿತ್ಯ ಸೃಷ್ಟಿ ವೈಶಿಷ್ಟ್ಯಪೂರ್ಣವಾಗಿದೆ. ಜನಪದ ಸಾಹಿತ್ಯದಿಂದ ಹಿಡಿದು ಶಿಷ್ಟ ಸಾಹಿತ್ಯದವರೆಗೂ ವ್ಯಾಪಕತೆಯನ್ನು ಪಡೆದುಕೊಂಡಿದೆ. ಕೋಲಿನ ಪದಗಳು, ಜೋಗುಳ ಪದಗಳು, ಮಂಗಳಾರತಿ ಪದಗಳು, ಭಕ್ತಿಭರಿತ ಸುವ್ವಾಲೆಗಳು, ಕಾಮನ ಹೋಳಿ ಹಾಡುಗಳಂತಹ ಅನೇಕ ಹಾಡುಗಳನ್ನು ರಚಿಸಿ ಜನಮನಕ್ಕೆ ಸ್ಪಂದಿಸಿದ್ದಾನೆ. ಈ ಎಲ್ಲ ಹಾಡುಗಳಲ್ಲಿ ಆಧ್ಯಾತ್ಮಿಕ ಅನುಭಾವವೇ ತುಂಬಿರುವುದು ಕವಿಯ ಆಧ್ಯಾತ್ಮಿಕ ಅನುಭೂತಿಯ ಸಂಪತ್ತಿಗೆ ನಿದರ್ಶನವಾಗಿದೆ.

ಅಂಗವಿಲ್ಲದ ಪುರುಷನ ಒಡಗೂಡಿ
ಅಂಗದ ಲಜ್ಜೆಯ ಹೊಂಡವ ತೋಡಿ
ಚಂದಾಗಿ ಬಂದು ಹೋಳಿ ಪದಗಳ ಹಾಡಿ
ಅಂಗವೆಂಬೊ ಗ್ರಾಮದೊಳು ತಿರಗ್ಯಾಡಿ.... ದುಂದುಮೆ:
ಮನೆಯೊಳು ಕುರುಳ ಬಾನವುವೊಟ್ಟಿ
ಕಾಮನೆಂಬ ಕುರುಳ ಹೆಡಗೂಡಿ ಕಟ್ಟಿ
ತಾಮಸದಲಿ ಹಿಡಿದು ಹುರುತೆಲಿ ಮೆಟ್ಟಿ
ಆ ಮಹಾ ಬಾಜಾರದೊಳು ತಂದೊಟ್ಟಿ... ದುಂ:
ದುರುಳ ಬುದ್ಧಿಯೆಂಬ ಹುಲ್ಲನೆ ಹೊಚ್ಚಿ
ಗುರುಮಂತ್ರವೆಂಬ ಕೆಂಡವನು ತಂದ್ದಚ್ಚಿ
ಕಾಮನ ಸುಡತಲಿ ಆಡಿದರೋಳಿ
ನೇಮ ನಿರಂಭಾರಿ ವೇಷವ ತಾಳಿ.. ದುಂ:

ಎಂಬ ಹೋಳಿ ಹಾಡೊಂದರಲ್ಲಿ ಅಂಗದ ಅವಗುಣಗಳನ್ನು ಅಳಿಸುವಂತೆ ಕರೆಕೊಡುತ್ತ ನಿಜವಾದ ಕಾಮದಹನದ ಉದ್ದೇಶವೇನೆಂಬುದನ್ನು ಅರ್ಥಗರ್ಭಿತವಾಗಿ ನಿರೂಪಿಸಿದ್ದಾನೆ.

ಕರಿಬಸವಾರ್ಯ ಭೋಗಲಿಂಗ ಶತಕ, ಶತಕತ್ರಯ, ಭುವನೈಕ ನಾಯಕಿ ಶತಕ, ಎಂಬ ಶತಕ ಕೃತಿಗಳನ್ನು ರಚಿಸಿದ್ದು ಭೋಗಲಿಂಗ ಶತಕವು ೨೭೪ ವಾರ್ಧಕ ಷಟ್ಪದಿಗಳನ್ನು ಹೊಂದಿದ್ದು ಇದು ಪ್ರಕಟಗೊಂಡಿದೆ.

ಅಮ್ಮವ್ವಯ ಕಥೆ' ಎಂಬ ಯಕ್ಷಗಾನವನ್ನೂ ಹಾಗೂ 'ಸಿರಿಯಾಳನಾತ್ಮಜ ಚೀಲಾಳನ ಚರಿತದ ಪದಗಳು' ಎಂಬ ಗೀತರೂಪಕವನ್ನೂ ರಚಿಸಿದ್ದಾನೆ. 'ಬಕ್ಕಪ್ಪನವರ ಚರಮ ಗೀತೆ'ಯನ್ನು ಬರೆದು ಕನ್ನಡದಲ್ಲಿ ಚರಮಗೀತೆ ಸಂಪ್ರದಾಯಕ್ಕೆ ತನ್ನದನ್ನೂ ಸೇರಿಸಿದ್ದಾನೆ. ಕನ್ನಡದಲ್ಲಿ ಮರಾಠಿ ಮಾದರಿಯ ಅಭಂಗಗಳನ್ನು ರಚಿಸಿದ್ದಾನೆ. ಬಸವರಗಳೆ, ಬಸವೇಶ್ವರ ಪವಾಡ ಪರಿವರ್ಧಿನಿ ಎಂಬ ಕೃತಿಗಳನ್ನು ರಚಿಸಿದ್ದು 'ಬಸವೇಶ್ವರ ಪವಾಡ ಪರಿವರ್ಧಿನಿ'ಯಲ್ಲಿ ಬಸವಣ್ಣನವರ ಎಪ್ಪತ್ತೇಳು ಪ್ರಕಟ ಪವಾಡಗಳನ್ನು ಹಾಗೂ ಇಪ್ಪತ್ನಾಲ್ಕು ಗುಪ್ತ ಪವಾಡಗಳನ್ನು ಮೆರೆದುದನ್ನು ಚಿತ್ರಿಸಿದ್ದಾನೆ.

ರಾಜೇಶ್ವರ ಪುರಾಣ, ಗೀತ ಪಂಚವಿಂಶತಿ, ಚೋಳರಾಜನ ಕಥೆ, ಪುಣ್ಯಕೋಟಿ ಗಾಯತ್ರಿ ಕಥೆ, ಗಣನಾಮ ರತ್ನಾವಳಿ ರಗಳೆ, ನೀತಿರತ್ನಾಕರ ಪಾದ ಸ್ತೋತ್ರಗಳು, ಸಮುದ್ರ ಮಥನ ಲೀಲಾ, ಶಿವರಾತ್ರಿ ಕಥೆ, ಶಂಭುವಿನ ಕಂದ, ಲಿಂಗಪೂಜೆಯ ಘನಮಹಿಮೆ, ಹರನಾಮದ ಪರಾಕ್ರಮ, ಅರ್ಹದ್ದಾಸನ 'ರಟ್ಟಮತ' ಕೃತಿಗೆ ಟೀಕೆ ಹಾಗೂ ಅಂಬಲಿಗೆ ಚನ್ನಮಲ್ಲಕವಿ ಬರೆದ 'ವೀರಸಂಗಯ್ಯನ ಚೌಪದನ' ಕೃತಿಗೆ ಟೀಕೆ ಈ ಮೊದಲಾದ ಕೃತಿಗಳನ್ನು ಬರೆದಿದ್ದಾನೆ. ಆದರೆ ಇವೆಲ್ಲವುಗಳು ಲಭ್ಯವಿಲ್ಲ.

ಕರಿಬಸವಾರ್ಯ ವಿರಚಿತ ಒಟ್ಟು ಕೃತಿಗಳಲ್ಲಿ 'ಶ್ರೀ ಕುಮಾರ ವಿಜಯ ವಿಳಾಸಂ' 'ಬಸವರಾಜ ರಘಟಾಬಂಧಂ' ಹಾಗೂ 'ಭೋಗಲಿಂಗ ಶತಕ' ಎಂಬ ಮೂರು ಕೃತಿಗಳು ಮಾತ್ರ ಪ್ರಕಟವಾಗಿದ್ದು ಉಳಿದೆಲ್ಲವೂ ಹಸ್ತಪ್ರತಿಗಳ ರೂಪದಲ್ಲಿಯೇ ಇವೆ. ಕೆಲವು ಹಸ್ತಪ್ರತಿಗಳು ಮೈಸೂರು, ಧಾರವಾಡ ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯಗಳ ಹಸ್ತಪ್ರತಿ ಭಂಡಾರಗಳಲ್ಲಿವೆ. ಕೆಲವು ಹಸ್ತಪ್ರತಿಗಳು ವೈಯಕ್ತಿಕ ಸಂಗ್ರಹಗಳಲ್ಲಿವೆ. ಒಟ್ಟಾರೆಯಾಗಿ ಕರಿಬಸವಾರ್ಯನ ಸಾಹಿತ್ಯ ಸೃಷ್ಟಿಯನ್ನು ಅವಲೋಕಿಸಿದಾಗ ಪಂಡಿತ-ಪಾಮರರಿಬ್ಬರಿಗೂ ಮನಸೂರೆಗೊಳ್ಳಬಲ್ಲ ಸಾಹಿತ್ಯ ಸಮೃದ್ಧಿಯನ್ನು ಒದಗಿಸಿದ್ದಾನೆಂಬುದು ಸ್ಪಷ್ಟವಾಗುತ್ತದೆ. ಅಂದಿನ ಸಾಹಿತ್ಯಕ ಪರಿಸರದಲ್ಲಿ ಕರಿಬಸವಾರ್ಯನದು ವಿಶಿಷ್ಟವಾದ ಕೊಡುಗೆ ಎಂಬುದರಲ್ಲಿ ಸಂದೇಹವಿಲ್ಲ.

**ಕೊನೆಯ ಟಿಪ್ಪಣಿಗಳು :**

೧. ಈ ಎಲ್ಲ ಕವಿಗಳ ಪ್ರಭಾವ ಕರಿಬಸವಾರ್ಯನ ಕೃತಿಗಳ ಮೇಲೆ ದಟ್ಟವಾಗಿ ಮೂಡಿದೆ. 'ಕವೀಂದ್ರ ಸ್ತೋತ್ರ' ಎಂಬ ಪದ್ಯವೊಂದರಲ್ಲಿ ಈ ಎಲ್ಲ ಕವಿಗಳು ತಮ್ಮ ಪ್ರತಿಭಾಶಕ್ತಿಯನ್ನು ತನಗೆ ಧಾರೆಯೆರೆಯುವಂತ ಸ್ತುತಿಸಿದ್ದಾನೆ. ಅಲ್ಲದೆ ಕವಿಯ ಮನೆಯಲ್ಲಿ ಈ ಮೇಲಿನ ಎಲ್ಲ ಕವಿಗಳ ಹಸ್ತಪ್ರತಿಗಳು ದೊರಕಿವೆ. ಜೊತೆಗೆ ಕೇಶಿರಾಜನ 'ಶಬ್ದಮಣಿ ದರ್ಪಣ' ಛಂದಸ್ಸಾರ ಮತ್ತು ವೈದ್ಯಶಾಸ್ತ್ರ ಜ್ಯೋತಿಶಾಸ್ತ್ರ ಗಣಿತಶಾಸ್ತ್ರದ ಹಸ್ತಪ್ರತಿಗಳೂ ದೊರಕಿವೆ.

೨. ಕುಮಾರ ವಿಜಯ ವಿಳಾಸಂ, ಅಧ್ಯಾಯ-೧, ಪದ್ಯ-೪೬, ಪುಟ-೧೦.

೩. ಅದೇ, ಅಧ್ಯಾಯ-೧, ಪದ್ಯ-೪೭, ಪುಟ-೧೦.

೪. ಅದೇ, ಅಧ್ಯಾಯ-೭೫, ಪದ್ಯ-೧೫, ಪುಟ-೭೭೫.

೫. ಅದೇ ಅಧ್ಯಾಯ ೭೫ ಪದ್ಯ-೨೪, ಪುಟ-೭೭೭.

International Research Journal
IJNRD
Research Through Innovation